ಸರ್ಕಾರದವರು ಮಾರ್ಗದರ್ಶನ ನೀಡಿರುವರೆ,

ಅ) ಹಾಗಿದ್ದಲ್ಲಿ ಪ್ರತಿ ಗ್ರಾಮಕ್ಕೆಂದು ಪೀಕ್ಷಕ ಸಮಿತಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಇ) ಹಾಗಿದ್ದಲ್ಲಿ ಎಂದು ರಚಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಹೌದು.

ಇ) ಪ್ರತಿ ಗ್ರಾಮ ಪಂಚಾಯತ್ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಸಭೆಗಳ ಮುಖಾಂತರ ವೀಕ್ಷಕ ಸಮಿತಿಗಳನ್ನು ರಚಿಸಲು ದಿನಾಂಕ 30-10-95ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ತುಮಕೂರಿನಲ್ಲಿ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ.

650 - ಶ್ರೀ ಎಸ್. ಶಿವಣ್ಣ (ತುಮಕೂರು) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರ್ತುಲ ರಸ್ತೆ (ರಿಂಗ್ ರಸ್ತೆ) ನಿರ್ಮಾಣ ಹಂತವು ತುಮಕೂರಿನಲ್ಲಿ ಪ್ರಾರಂಭವಾಗಿದೆಯೇ?

ಆ) ತುಮಕೂರು ನಗರದ ಬೈಪಾಸ್ ರಸ್ತೆ ನಿರ್ಮಿಸುವ ವಿಚಾರ ಸರ್ಕಾರದ ಆಲೋಚನೆಯಲ್ಲಿದೆಯೇ? ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ತುಮಕೂರು ನಗರದಲ್ಲಿ ಹಾದು ಹೋಗುತ್ತಿರುವ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಈಗಾಗಲೇ ಬೈಪಾಸನ್ನು ನಿರ್ಮಿಸಲಾಗಿದೆ.

ಪಂಚಾಯತ್ ರಾಜ್ ಆದಳಿತಕ್ಕೆ ಹೆಚ್ಚಿನ ಹಣ.

651 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಹಣ ನೀಡುವ ಬಗ್ಗೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ?

ಆ) ಈಗ ನೀಡುತ್ತಿರುವ ಮೊತ್ತವೆಷ್ಟು?

ಇ) ನೀಡಲು ತೀರ್ಮಾನಿಸಿರುವ ಮೊತ್ತವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಹಣ ನೀಡುವ ವಿಚಾರ ಸರ್ಕಾರವು ಪರಿಶೀಲನೆಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಯೋಜನೆಯಡಿಯಲ್ಲಿ ರೂ. 110031.37 ಲಕ್ಷ ಹಾಗೂ ಯೋಜನೇತರ ಬಾಬಿನಲ್ಲಿ ರೂ. 135410.19 ಲಕ್ಷ ಹಣ ಒದಗಿಸಲಾಗಿದೆ. ಯೋಜನೆ ಬಾಬಿನಲ್ಲಿ ಒದಗಿಸಿದ ರೂ. 110031.37 ಲಕ್ಷ ಹಣದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರೂ. 37108.37 ಲಕ್ಷ ತಾಲ್ಲೂಕು ಪಂಚಾಯತಿಗಳಿಗೆ ರೂ. 46068.72 ಲಕ್ಷ ಮತ್ತು ಗ್ರಾಮ ಪಂಚಾಯತಿಗಳಿಗೆ ರೂ. 26854.28 ಲಕ್ಷ ಅನುದಾನವನ್ನು ನಿಗಧಿಗೊಳಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ನವೀಕರಣ ಕಾರ್ಡುಗಳಿಂದ ವಂಚಿತರಾದ ಪಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ.

653 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಪ್ರದೇಶದಲ್ಲಿ ಇತ್ತೀಚೆಗೆ ಪಡಿತರ ಕಾರ್ಡುಗಳನ್ನು ನವೀಕರಣ ಮಾಡಲಾಗಿದ್ದು ಹಸಿರು ಕಾರ್ಡಿನ ಯೋಜನೆಯಡಿಯಲ್ಲಿ ಬರುವ ಅನೇಕ ಫಲಾನುಭವಿಗಳು ವಂಚಿತರಾಗಿದ್ದು ಈ ಜನಾಂಗಕ್ಕೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಜನಾಂಗಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದೇ;

ಶ್ರೀ ಎಸ್. ನಂಜಪ್ಪ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಗ್ರಾಮ ಸಭೆಗಳನ್ನು ನಡೆಸಿದ ಸಮಯದಲ್ಲಿ ಕೆಲವು ಕುಟುಂಬಗಳು ನಿಗದಿಪಡಿಸಿದ ಆದಾಯಕ್ಕಿಂತ ಹೆಚ್ಚಿಗೆ ಇದ್ದ ಕಾರಣ ಗ್ರಾಮ ಸಭೆಗಳಲ್ಲಿ ನಿರ್ದರಿಸಿದಂತೆ 1,36,151 ಹಸಿರು ಪಡಿತರ ಚೀಟಿಗಳನ್ನು ರದ್ದು ಪಡಿಸಿದೆ.

ಆ) ಆದಾಯಕ್ಕಿಂತ ಜಾಸ್ತಿಯಿರುವ ಕುಟುಂಬಗಳಿಗೆ ಕೇಸರಿ ಪಡಿತರ ಚೀಟಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಹೊಸ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ.

654 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?